ಗುಪ್ತವಾರ್ತೆ ಹಾಗೂ ರಕ್ಷಣಾ ಸಂಘಟನೆಗಳನ್ನು 2005ರ ಮಾಹಿತಿ ಹಕ್ಕು ಅಧಿನಿಯಮದ ವ್ಯಾಪ್ತಿಯಿಂದ ಹೊರತುಪಡಿಸಿ ದಿನಾಂಕ: 5.12.2005 ರಂದು ಹೊರಡಿಸಲಾದ ಡಿಪಿಎಆರ್ 44 ಆರ್‌ಟಿಐ 2004 ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(2) ಶ್ರೀ ಎಂ.ಪಿ.ಪ್ರಕಾಶ್: (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):

(ಅ) ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ ನಿಯಮಾವಳಿ 2002ರ 4ನೇ ನಿಯಮದ 2ನೇ ಉಪ ನಿಯಮಕ್ಕೆ ತಿದ್ದುಪಡಿ ಮಾಡಿ 08.05.2006 ರಂದು ಹೊರಡಿಸಿರುವ ಎಫ್‌ಡಿ 3 ಎಸ್‌ಆರ್‌ಎ 2004ನೇ ಸಂಖ್ಯೆಯ ಅಧಿಸೂಚನೆ.

(ಆ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 224–ಬಿ, 247–ಎ, 489, 489–ಬಿ ಮತ್ತು ಪರಿಶಿಷ್ಟ Iಕ್ಕೆ ತಿದ್ದುಪಡಿ ಮಾಡಿ ದಿನಾಂಕ 8.5.2006 ರಂದು ಹೊರಡಿಸಲಾದ ಎಫ್‌ಡಿ 6 ಎಸ್‌ಆರ್‌ಐ 2004ನೇ ಸಂಖ್ಯೆ ಅಧಿಸೂಚನೆ.

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

(ಇ) ಸಾರ್ವಜನಿಕ ಹಿತದೃಷ್ಟಿಯಿಂದ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ನೊಂದಾಯಿಸಲ್ಪಟ್ಟ ಮೋಟಾರು ವಾಹನಗಳಿಗೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ದಿನಾಂಕ: 1.4.2005ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ: 27.5.2006 ರಂದು ಹೊರಡಿಸಲಾದ ಎಫ್‌ಡಿ 4 ಸಿಇಟಿ 2006 ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು: ಮಂಡಿಸಲಾಯಿತು.

4. ಅರ್ಜಿಗಳನ್ನೊಪಿಸುವುದು

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್: ಮಾನ್ಯ ಅಧ್ಯಕ್ಷರೆ, ಕೆಳಕಂಡ ಅರ್ಜಿಗಳನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ.

(1) ಹುಬ್ಬಳ್ಳಿಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಲಾಗುತ್ತಿರುವ ವಾಂಬೆ ಮನೆಗಳ ನಿರ್ಮಾಣದಲ್ಲಿ ವಿಳಂಬವಾಗಿರುವ ಬಗ್ಗೆ.

(2) ಹಳೇ ಹುಬ್ಬಳ್ಳಿ ಬಡಾವಣೆಗಳಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸಲು ಎಸ್.ಎಂ.ಕೃಷ್ಣ ನಗರದಲ್ಲಿರುವ ಪಾಲಿಕೆ ಜಾಗದಲ್ಲಿ ದೊಡ್ಡ ಪ್ರಮಾಣದ ನೀರಿನ ಟ್ಯಾಂಕನ್ನು ನಿರ್ಮಿಸುವ ಬಗ್ಗೆ.

ಅಧ್ಯಕ್ಷರು: ಮಂಡಿಸಲಾಯಿತು.

5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: (ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಮಕ್ಕಳು ಪ್ರವಾಹ ಹಾಗೂ ಕೆರೆಯಲ್ಲಿ ಜಲಸಮಾಧಿಯಾಗಿರುವ ಬಗ್ಗೆ.

ಶ್ರೀ ಎಂ.ವೈ.ಪಾಟೀಲ್(ಅಫಜಲ್‌ಪುರ):ಮಾನ್ಯ ಅಧ್ಯಕ್ಷರೆ, ದಿನಾಂಕ:25.6.2006 ರಂದು ಗುಲ್ಬರ್ಗಾ ಜಿಲ್ಲೆಯಲ್ಲಿ 5ಜನ ಮಕ್ಕಳ ಜಲಸಮಾಧಿಯಾಗಿದೆ. ನನ್ನ ಕ್ಷೇತ್ರದ ಗಾಣಗಾಪುರ ದೇವಸ್ಥಾನದ ಹತ್ತಿರ ಭೀಮಾನದಿಯ ಸಂಗಮದಲ್ಲಿ ಪ್ರವಾಹದಿಂದ ಇಬ್ಬರು ಬಾಲಕರು ಕೊಚ್ಚಿಕೊಂಡು ಹೋದರು. ಅದಾದ ನಂತರ ಅದೇ ದಿವಸ ಕಲ್ಬುರ್ಗಿ ನಗರದಲ್ಲಿ ಕೆರೆಯಲ್ಲಿ 3 ಜನ ಮಕ್ಕಳು ಜಲಸಮಾಧಿಯಾಗಿದ್ದಾರೆ. ಇಂತಹ ಸ್ಥಳಗಳಲ್ಲಿ ಪೋಲೀಸರ ಕಾವಲು ಆಗಬೇಕು ಎನ್ನುವುದು ನನ್ನದು. ಮುಂಜಾಗ್ರತೆಯ ಕ್ರಮವಾಗಿ ಸರ್ಕಾರ ಇದಕ್ಕೆ ಕಾವಲುಗಾರರನ್ನು ಇಡಬೇಕು ಎಂದು ಹೇಳಿ ನನ್ನ ವಿನಂತಿ ಇದೆ. ಈ ಮೃತ ಕುಟುಂಬಕ್ಕೆ ಪರಿಹಾರ ಸರ್ಕಾರ ಒದಗಿಸಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ವೈ. ಪಾಟೀಲರು ಈ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಲಕ್ಷ್ಮಿ ಹಾಗೂ ಗುರುರಾಜ್ ಎನ್ನುವ ಮಕ್ಕಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಅಸುನೀಗಿದ್ದಾರೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಇವತ್ತು ಅದು ಪತ್ರಿಕೆಯಲ್ಲಿ ಬಂದಿದೆ. ಈಗಾಗಲೇ ನಾನು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾದ ಮಾಹಿತಿಯನ್ನು ಕಳುಹಿಸಿಕೊಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತು ಪರಿಹಾರದ ಬಗ್ಗೆ ಮತ್ತು ಇನ್ನಿತರ ರಕ್ಷಣೆಯ ಬಗ್ಗೆ ಅವರು ಹೇಳಿದ್ದಾರೆ. ಅದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಿ ಎಲ್ಲಾ ರೀತಿಯ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

(ಅ) ಶ್ರೀನಿವಾಸಪುರ ಮತಕ್ಷೇತ್ರದಲ್ಲಿ ರಾಜಕೀಯವಾಗಿ ನಡೆಯುತ್ತಿರುವ ವರ್ಗಾವಣೆ ಹಾಗೂ ಇತರ ಇತರ ಅನ್ಯಾಯದ ಬಗ್ಗೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಈ ರಾಜಕೀಯ ಬದಲಾವಣೆಗಳಾಗಿ ಹೊಸ ಸರ್ಕಾರ ಬಂದಮೇಲೆ ವರ್ಗಾವರ್ಗಿಯೂ ಕೂಡ ಅದಕ್ಕೆ ಕೋಇನ್‌ಸೈಡ್ ಆಗಿಬಿಂತು. ನನ್ನ ಕ್ಷೇತ್ರದ ಮಟ್ಟಿಗೆ ಆಗಿದ್ದರೆ ನಮ್ಮ ಮಾಜಿ ಶಾಸಕರು ಅವರ ಪಕ್ಷದಲ್ಲಿ ಸಕ್ರಿಯವಾಗಿದ್ದಾರೆ. ಸಂತೋಷ ಅವರವರ ಇಷ್ಟ. ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಚುನಾವಣೆಯ ವೈಷಮ್ಯ ಇಟ್ಟುಕೊಂಡು ಅದಕ್ಕೊಂದು ರೀತಿ ನೀತಿ ತತ್ವ ಬದ್ಧತೆ ಏನೂ ಇಲ್ಲ. 44 ಗ್ರಾಮ ಪಂಚಾಯಿತಿಗಳು ಇದ್ದರೆ ರೆವಿನ್ಯೂ ಸರ್ಕಲ್ಸ್ 30ಜನ ವಿಲೇಜ್ ಅಕೌಂಟೆಂಟ್ಸ್‌ಗಳಿಗೆ ವರ್ಗಾವಣೆ, 25 ಗ್ರಾಮ ಪಂಚಾಯಿತಿಗಳು ಇದ್ದರೆ 18 ಜನ ಗ್ರಾಮ ಪಂಚಾಯಿತಿ ಸೆಕ್ರೆಟರಿಗಳಿಗೆ ವರ್ಗ. 3 ಪೋಲೀಸ್ ಸ್ಟೇಶನ್ ಇದ್ದರೆ 3 ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ವರ್ಗಾವಣೆ. ಮಾಡಿಕೊಳ್ಳಿ ನೀವು ಯಾರಿಗೆ ಬೇಕಾದರು, ಬೇಕಾದರೆ ಅತನಿಗೆ ಡ್ರೆಸ್ ತಂದು ಕೊಟ್ಟು ತಂದಿಟ್ಟು ಬಿಡಿ ನನಗೆ ಏನೂ ಪ್ರಾಬ್ಲಮ್ ಇಲ್ಲ. ಇಲ್ಲಿ ನೋಡಿ ಮಾನ್ಯ ಹೊರಟ್ಟಯವರು ಕುಳಿತಿದ್ದಾರೆ. ಇವರು ಕೌನ್ಸಿಲ್‌ನಲ್ಲಿ ಬಹಳ ದೊಡ್ಡ ಹೋರಾಟವನ್ನು ಶಿಕ್ಷಕರ ಪರವಾಗಿ ಮಾಡಿದ್ದಾರೆ. ಮಾಜಿ ಶಾಸಕರು ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಏನು ಬರೆಯುತ್ತಾರೆಂದರೆ, ಈ ಕಳಕಂಡ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರು ನನ್ನ ಕ್ಷೇತ್ರದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದು, ನಾವು ಮಾತ್ರಕ್ಕೆ ಕೆಲಸ ನಿರ್ವಹಿಸುತ್ತಾರೆ. ಇವರು